# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಬಸವರಾಜ ಪಾಟೀಲ್ ಇಟಗಿ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1422 (1679)

ಉತ್ತರ ದಿನಾಂಕ : 19.03.2021

| ಕ್ರ.ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನಲ್ಲಿ ಎಷ್ಟು ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಮಾಡಲಾಗಿದೆ; | ಕಳೆದ 3 ವರ್ಷಗಳಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿಗೆ ಕೆ.ಕೆ.ಆರ್.ಡಿ.ಬಿ ಯೋಜನೆಯಡಿಯಲ್ಲಿ ಹೊರತುಪಡಿಸಿ ಇನ್ನಾವುದೇ ಯೋಜನೆಯಡಿ ಶುದ್ಧ ಕುಡಿಯುವ ನೀರಿನ ಘಟಕಗಳು ಅನುಮೋದನೆಯಾಗಿರುವುದಿಲ್ಲ.<br><br>ಕೆ.ಕೆ.ಆರ್.ಡಿ.ಬಿ ಅಡಿಯಲ್ಲಿ ಅನುಮೋದನೆಯಾದ ಶುದ್ಧ ಕುಡಿಯುವ ನೀರಿನ ಘಟಕಗಳ ವಿವರಗಳನ್ನು **ಅನುಬಂಧ-1ರಲ್ಲಿ** ಲಗತ್ತಿಸಿದೆ. |
| ಆ) | ಕುಡಿಯುವ ನೀರಿನ ಘಟಕ ನಿರ್ಮಾಣ ಕಾರ್ಯವನ್ನು ಯಾವ ಖಾಸಗಿ ಕಂಪನಿಗೆ ವಹಿಸಲಾಗಿದೆ ಮತ್ತು ಇಲ್ಲಿಯವರೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ; | ವಿವರಗಳನ್ನು **ಅನುಬಂಧ-1ರಲ್ಲಿ** ಲಗತ್ತಿಸಿದೆ. |
| ಇ) | ಕುಡಿಯುವ ನೀರಿನ ಘಟಕ ಪ್ರಾರಂಭವಾಗಿ ಕೆಲವು ದಿವಸಗಳ ನಂತರ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮವೇನು; | ಬಂದಿದೆ.<br>ಸದರಿ ಘಟಕಗಳ ಸ್ಥಾಪನೆಯ ನಂತರ 5 ವರ್ಷಗಳವರೆಗೆ ಕಾರ್ಯಚರಣೆ ಮತ್ತು ನಿರ್ವಹಣೆಯನ್ನು ಮೂಲ ಸಂಸ್ಥೆಗಳೇ ನಿರ್ವಹಿಸಬೇಕಾಗಿದ್ದು, ಸದರಿ ಸಂಸ್ಥೆಗಳು ಘಟಕಗಳನ್ನು ಸರಿಯಾಗಿ ನಿರ್ವಹಣೆ ಮಾಡದೇ ಇದ್ದ ಸಮಯದಲ್ಲಿ ಟೆಂಡರ್ ನಿಯಾಮಾನುಸಾರ ದಂಡ ವಿಧಿಸಲಾಗಿದ್ದು, ಸದರಿ ಏಜೆನ್ಸಿಯ ಕಾರ್ಯಚರಣೆ ಮತ್ತು ನಿರ್ವಹಣೆ ಮೊತ್ತದಲ್ಲಿ ದಂಡದ ಮೊತ್ತವನ್ನು ಕಡಿತಗೊಳಿಸಿ, ಉಳಿದ ಮೊತ್ತವನ್ನು ಮಾತ್ರ ಪಾವತಿಸಲು ಕ್ರಮ ಕೈಗೊಂಡು ಘಟಕಗಳನ್ನು ನಿರಂತರ ಕಾರ್ಯಚರಣೆಯಲ್ಲಿಡಲು ಅಗತ್ಯ ಕ್ರಮವಹಿಸಲಾಗುತ್ತಿದೆ. |
| ಈ) | ಘಟಕಗಳಿಗೆ ಸಾಕಷ್ಟು ಹಣ ವೆಚ್ಚ ಮಾಡಿ ನಿರ್ಮಾಣ ಮಾಡಿದಾಗ್ಯೂ ಸಿಬ್ಬಂದಿಗಳು ಸರಿಯಾಗಿ ನಿರ್ವಹಣೆ ಮಾಡದೇ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು? | |

ಸಂ:ಗ್ರಾಕುನೀ&ನೈಇ 102 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

## ಅನುಬಂಧ-1

| ಕ್ರಸಂ | ಅನುಮೋದಿತ ವರ್ಷ | ಘಟಕಗಳ ಸಂಖ್ಯೆ | ಏಜೆನ್ಸಿ ಹೆಸರು | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | 2017–18 | 35 | ಶ್ರೀ.ಚನ್ನಾರೆಡ್ಡಿ, ಕಕ್ಕಲದೊಡ್ಡಿ ಹಾಗೂ ಶ್ರೀ. ಸಿ.ಕೆ.ವೆಂಕಟೇಶ್ ಬೆಂಗಳೂರು | 328.68 |
| 2 | 2018–19 | 02 | | 21.74 |
| 3 | 2019–20 | 10 | | 97.13 |
| | **ಒಟ್ಟು** | **47** | | **447.55** |

ಆಯುಕ್ತರು
ಗ್ರಾ.ಕು.ನೀ & ನೈ ಇಲಾಖೆ
ಬೆಂಗಳೂರು.